**<u>ವಿಶೇಷ ಅಪರಾಧಿಕ</u> ಪ್ರಕರಣ ಸಂಖ್ಯೆ: 30/2023**

ಪ್ರಾ.ಸಾ 11
ಚಾ.ಸಾ 14

**ಕರ್ನಾಟಕ ಸರ್ಕಾರ** **(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ**<br>**(ಆರ್.ಪಿ.ಸಂಖ್ಯೆ: 57)**<br>**ನಮೂನೆ ಸಂಖ್ಯೆ 4**<br>**(ಸಿವಿಲ್)** |

**<u>1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>**
**<u>ವಿಶೇಷ ಅಪರಾಧಿಕ ಪ್ರಕರಣ ಸಂಖ್ಯೆ: 30/2023</u>**

**ದಿನಾಂಕಃ 02.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ- | ಸಿ.ಆರ್.ಬಾಲಸುಬ್ರಮಣ್ಯಂ |
| **ತಂದೆ ಹೆಸರು** | ಃ- | ರಾಮಚಂದ್ರ ರಾವ್ |
| **ವಯಸ್ಸು** | ಃ- | **44 ವರ್ಷ** |
| **ಉದ್ಯೋಗ** | ಃ- | ಹೆಚ್.ಸಿ, ಡಿ.ವೈ.ಎಸ್.ಪಿ ಕಚೇರಿ, ಚಿಕ್ಕಬಳ್ಳಾಪುರ |
| **ವಾಸಸ್ಥಳ** | ಃ- | ಚಿಕ್ಕಬಳ್ಳಾಪುರ |

**<u>ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-</u>**

1. **2016** ರಿಂದ ಮುಖ್ಯ ಪೇದೆ ಆಗಿ ಡಿ.ವೈ.ಎಸ್.ಪಿ ಕಚೇರಿ, ಚಿಕ್ಕಬಳ್ಳಾಪುದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ **07.07.2023** ರಂದು ಮದ್ಯಾಹ್ನ **3.00** ಗಂಟೆ ಸಮಯದಲ್ಲಿ ನಾನು ಕಚೇರಿಯಲ್ಲಿದ್ದಾಗ ಡಿ.ವೈ.ಎಸ್.ಪಿ ರವರು ಈ ಪ್ರಕರಣದ ಸಂಬಂಧವಾಗಿ ಸ್ಥಳಪಂಚನಾಮೆಗೆ ಹೋಗಬೇಕೆಂದು, ಕಚೇರಿಯ ಹ್ಯಾಂಡಿ ಕ್ಯಾಮರಾವನ್ನು ತೆಗೆದುಕೊಂಡು ಬರುವಂತೆ ಸೂಚನೆ ನೀಡಿದ ಮೇರೆಗೆ, ನಾನು ಹ್ಯಾಂಡಿ ಕ್ಯಾಮರಾದೊಂದಿಗೆ ಡಿ.ವೈ.ಎಸ್.ಪಿ ರವರ ಜೊತೆ ಚಿಕ್ಕಬಳ್ಳಾಪುರ ತಾಲ್ಲೂಕು ಯರ್ರಬಾಪನಹಳ್ಳಿಯಲ್ಲಿರುವ ಪ್ರಾ.ಸಾ-1 ರವರ ಮನೆಯ ಬಳಿಗೆ ಭೇಟಿ

ಪ್ರಾಸಾ 11
ಚಾಸಾ 14

ನೀಡಿರುತ್ತೆವೆ. ಸ್ಥಳದಲ್ಲಿ ಚಾಸಾ-17 ರವರು ಪ್ರಾಸಾ-6 ಮತ್ತು 7 ರವರಿಗೆ ಪಂಚರಾಗಿ ಸಹಕರಿಸುವಂತೆ ತನಿಖಾಧಿಕಾರಿಗಳು ನೋಟಿಸ್ ನೀಡಿರುತ್ತಾರೆ.

**3.** ನಂತರ ಪ್ರಾಸಾ-**1** ರವರು ತಮ್ಮ ಮನೆಯ ಮುಂಭಾಗದಲ್ಲಿರುವ ಕಾಂಕ್ರಿಟ್ ರಸ್ತೆಯಲ್ಲಿ ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ತನಿಖಾಧಿಕಾರಿಗಳು ಸಂಜೆ **4.00** ರಿಂದ **5.00** ರ ತನಕ ಪಂಚನಾಮೆ ಮಾಡಿರುತ್ತಾರೆ. ಸದರಿ ಸಮಯದಲ್ಲಿ ಕೃತ್ಯಕ್ಕೆ ಉಪಯೋಗಿಸಲಾದ ದೊಣ್ಣೆಯನ್ನು ಪ್ರಾಸಾ-**1** ರವರು ಹಾಜರುಪಡಿಸಿರುತ್ತಾರೆ. ಸದರಿ ಪಂಚನಾಮೆ ಸಮಯದಲ್ಲಿ ತನಿಖಾಧಿಕಾರಿಗಳ ಸೂಚನೆಯಂತೆ ನಾನು ಹ್ಯಾಂಡಿ ಕ್ಯಾಮರಾದಿಂದ ಪೊಟೋಗಳನ್ನು ತೆಗೆದುಕೊಂಡಿರುತ್ತೆನೆ.

**4.** ನಂತರ ಕಚೇರಿಗೆ ವಾಪಸ್ಸಾಗಿ ಸದರಿ ಕ್ಯಾಮರಾದಲ್ಲಿದ್ದ ಪೊಟೋಗಳನ್ನು ನಮ್ಮ ಕಚೇರಿಯಲ್ಲಿರುವ ಕ್ಯಾನನ್ ಪ್ರಿಂಟರ್ ಮೂಲಕ ಪ್ರಿಂಟ್ ಮಾಡಿ ಸದರಿ ಪೊಟೋಗಳನ್ನು ತನಿಖಾಧಿಕಾರಿಯವರಿಗೆ ನೀಡಿದ್ದೇನೆ. ಸದರಿ ಪೊಟೋ ಸಂಬಂಧವಾಗಿ ಕಲಂ *65(ಬಿ)* ಭಾರತದ ಸಾಕ್ಷಿ ಅಧಿ ನಿಯಮದಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ಪೊಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ **5** ರಿಂದ **8** ಎಂದು ಗುರುತಿಸಲಾಗಿರುತ್ತದೆ, ಅವುಗಳ ಕೆಳಭಾಗದಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ **5(ಎ), 6(ಎ), 7(ಎ)** ಮತ್ತು **8(ಎ)** ಎಂದು

ಪ್ರಾಸಾ 11
ಚಾಸಾ 14

ಗುರುತಿಸಲಾಯಿತು. ಕಲಂ *65(ಬಿ)* ಭಾರತದ ಸಾಕ್ಷಿ ಅಧಿ ನಿಯಮದಡಿಯಲ್ಲಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ **15,** ಸಾಕ್ಷಿ ಸಹಿಯನ್ನು ನಿಪಿ **15(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ನೋಡಿ ಗುರುತಿಸಿದ್ದು, ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ **3(ಸಿ)** ಎಂದು ಗುರುತಿಸಲಾಯಿ. ಮು. ಮಾ **1** ಕೋಲನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ. ಕೆ.ಎಸ್.ಎನ್. ವಕೀಲರಿಂದಃ-</u>

**5.** ಪೊಟೋಗ್ರಾಫಿ ಮಾಡಲು ವಿಶೇಷ ತರಬೇತಿಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿಯು ನಾನು ಮೂಲ ತರಬೇತಿಯನ್ನು ಪಡೆದಿದ್ದೆನೆಂದು ಹೇಳುತ್ತಾರೆ. ನಮ್ಮ ಕಚೇರಿಯಲ್ಲಿರುವ ಇತರ ಸಿಬ್ಬಂದಿಗಳು ಸಹ ಸದರಿ ಕ್ಯಾಮರಾವನ್ನು ಉಪಯೋಗಿಸುತ್ತಾರೆ. ಕ್ಯಾಮರಾದ ತಾಂತ್ರಿಕ ವಿಚಾರದ ಬಗ್ಗೆ ನನಗೆ ತಿಳಿದಿಲ್ಲ. ದಿಃ **07.07.2023** ರಂದು ನಾನು ಯರ್ರಬಾಪನಹಳ್ಳಿಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ, ಪ್ರಾಸಾ-**1** ರವರು ಮನೆ ಬಳಿ ಪೊಟೋ ತೆಗೆದಿಲ್ಲ ಎಂದರೆ ಸರಿಯಲ್ಲ, ನಿಪಿ **5** ರಿಂದ **8** ಪೊಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೆವೆಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಮು. ಮಾ **1** ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು. ಮಾ **1** ರ ಮೇಲೆ ನನ್ನ ಸಹಿ ಇಲ್ಲ ಎಂದರೆ ಸರಿ. ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

ಪ್ರಾಸಾ 11
ಚಾಸಾ 14

**<u>ಮರುವಿಚಾರಣೆ ಇಲ್ಲ.</u>**

**(ದಿನಾಂಕಃ 02.08.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಶಿವಪ್ರಸಾದ್.ಕೆ.ಬಿ.)**
**1ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**